ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ. DW-2

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ ಃ 11.06.2025

ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಯರ ಪರ ವಕೀಲರಿಂದಃ

ನನ್ನ ತಾತ ಕಾಳೇಗೌಡರಿಗೆ ಇಬ್ಬರು ಹೆಂಡತಿಯರು ಇದ್ದರು ಎಂದರೆ ಸರಿ. ಮೊದಲನೆ ಹೆಂಡತಿ ಹೆಸರು ಮರಿಯಮ್ಮ ಇರುತ್ತದೆ ಎಂದರೆ ಸರಿ. ಮರಿಯಮ್ಮರವರಿಗೆ ಮಹಾದೇವಮ್ಮ ಹಾಗೂ ಚೆನ್ನಮ್ಮ ಎಂಬ ಇಬ್ಬರು ಹೆಣ್ಣು ಮಕ್ಕಳುಗಳು ಮಾತ್ರ ಇದ್ದರು ಎಂದರೆ ಸರಿ.

ಕಾಳೇಗೌಡರ 2 ನೇ ಹೆಂಡತಿ ಹೆಸರು ನಾಗಮ್ಮ ಎಂದರೆ ಸರಿ. ಸದರಿ ನಾಗಮ್ಮ ರವರು ಈ ಪ್ರಕರಣದ 1 ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿ. ನಾಗಮ್ಮ ರವರಿಗೆ ಮಾದೇಗೌಡ, ಗವಿಸಿದ್ದೇಗೌಡ , ಜಯಲಕ್ಷ್ಮಿ ಹಾಗೂ ಪೂರ್ಣಿಮ ಎಂಬ 4 ಜನ ಮಕ್ಕಳುಗಳು ಇರುತ್ತಾರೆ ಎಂದರೆ ಸರಿ. ಮರಿಯಮ್ಮರವರ ಮಗಳಾದ ಮಹಾದೇಮ್ಮನವರನ್ನು ನಾಗಮ್ಮರವರ ತಮ್ಮನಾದ ಗುರುಲಿಂಗೇಗೌಡರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿ. ನನ್ನ ಅಜ್ಜಿಯ ಹೆಸರು ಚೆನ್ನಮ್ಮ ಇರುತ್ತದೆ. ನನ್ನ ತಾಯಿಯ ಹೆಸರು ಸವಿತ ಇರುತ್ತದೆ. ನನ್ನ ತಂದೆಯ ಹೆಸರು ಗವಿಸಿದ್ದೇಗೌಡರ ಇರುತ್ತದೆ. ಸದರಿ ಗವಿಸಿದ್ದೇಗೌಡರು ಈ ಪ್ರಕರಣದ 3 ನೇ ಪ್ರತಿವಾದಿ ಇರುತ್ತಾರೆ ಎಂದರೆ ಸರಿ.

ಮರಿಯಮ್ಮ ಹಾಗೂ ನಾಗಮ್ಮರವರ ಮಕ್ಕಳುಗಳು ಅವರ ಜೀವಿತ ಕಾಲದಲ್ಲಿ 2007 ನೇ ಇಸವಿಯಲ್ಲಿ ದಾವಾ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗವನ್ನು ಮರಿಯಮ್ಮನ ಮಕ್ಕಳಾದ ಮಹಾದೇವಮ್ಮ ಹಾಗೂ ಚೆನ್ನಮ್ಮರವರು ಒಪ್ಪಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಹೆಂಡತಿಯಾದ ನಾಗಮ್ಮರವರಿಗೂ ಸಹಾ ಅಜ್ಜುಪಾಲುಗಳನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು 2007 ನೇ ಇಸವಿಯಲ್ಲಿಯೇ ಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ಆದ ಕಾರಣ ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ತಂದೆ ಗವಿಸಿದ್ದೇಗೌಡರು ಮತ್ತು ಮಾದೇಗೌಡರು ಒಂದೇ ಮನೆಯಲ್ಲಿ ಮಧ್ಯದಲ್ಲಿ ಗೋಡೆ ಹಾಕಿಕೊಂಡು ವಾಸವಾಗಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಒಂದೇ ಮನೆಯಲ್ಲಿ ವಾಸವಾಗಿದ್ದು ಆ ರೀತಿ ಗೋಡೆ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಚೆನ್ನಮ್ಮರವರ ಮನೆಯಲ್ಲಿ ವಾಸವಾಗಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನನ್ನ ತಾಯಿಯವರು 2010 ರಲ್ಲಿ ತೀರಿಕೊಂಡಿರುತ್ತಾರೆ. 2007 ರ ವಿಭಾಗ ಪತ್ರಕ್ಕೆ ನನ್ನ ತಂದೆಯವರು ಕೂಡ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಾನು ಆಗ ಚಿಕ್ಕವನಾಗಿದ್ದೆನು ಎಂದು ನುಡಿಯುತ್ತಾರೆ.

2007 ರಲ್ಲೇ ದಾವಾ ಸ್ವತ್ತುಗಳು ವಿಭಾಗವಾಗಿದ್ದು ಅದರಂತೆ ಮಾದೇಗೌಡರು ಹಾಗೂ ಗವಿಸಿದ್ದೇಗೌಡರಿಗೆ ಬಂದಂತ ಆಸ್ತಿಗಳಲ್ಲಿ ಅವರುಗಳು ಪ್ರತ್ಯೇಕ ಸ್ವಾಧೀನದಲ್ಲಿದ್ದು ಅವುಗಳನ್ನು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪ್ರಸ್ತುತ ನನ್ನ ತಂದೆಯವರು 2 ನೇ ಮದುವೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆಯವರ 2 ನೇ ಹೆಂಡತಿ ಮತ್ತು ಮಕ್ಕಳು ನನ್ನ ತಂದೆಯ ಮನೆಯಲ್ಲಿಯೇ ವಾಸವಾಗಿರುತ್ತಾರೆ ಎಂದರೆ ಸರಿ.

2007 ರಲ್ಲಿಯೇ ನಿಮ್ಮ ತಂದೆಗೆ ಹಿಸ್ಸೆ ಬಂದಿರುವ ಕಾರಣ ನೀವು ನಿಮ್ಮ ತಂದೆಗೆ ಬಂದಿರುವ ಹಿಸ್ಸೆಯಲ್ಲಿ ಮಾತ್ರ ಭಾಗ ಕೇಳಬೇಕಾಗುತ್ತದೆಯೇ ಹೊರತು ಎಲ್ಲಾ ದಾವಾ ಸ್ವತ್ತುಗಳಲ್ಲಿ ನೀವು ಭಾಗ ಕೇಳಲು ಅರ್ಹರಲ್ಲ ಎಂದರೆ ಸರಿಯಲ್ಲ. ನನ್ನ ತಾತ ಕಾಳೇಗೌಡರು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

2007 ರಲ್ಲಿಯೇ ವಿಭಾಗ ಆಗಿದ್ದರೂ ಸಹಾ ನಾಗಮ್ಮ ರವರಿಗೆ ಬಂದಂತ ಅಜ್ಜುಪಾಲಿನ ಸ್ವತ್ತಿಗೆ ಸಂಬಂಧಿಸಿದಂತೆ ವಿವಾದ ಉಂಟಾದ ಕಾರಣ ವಾದಿಯರು ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಮಹಾದೇವಮ್ಮರವರಿಗೆ ದಾವಾ ಸ್ವತ್ತಿಗಿಂತ ಹೆಚ್ಚಿನ ವಿಸ್ತೀರ್ಣದ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ

ಹೆಂಡತಿಗೆ ಹಾಗೂ 1 ನೇ ಪ್ರತಿವಾದಿಗೆ ದಾವಾ ಸ್ವತ್ತುಗಳಲ್ಲಿ ಹೆಚ್ಚಿನ ಭಾಗಾಂಶದ ಹಕ್ಕು ಇರುವ ಕಾರಣ ಅದನ್ನು ನಿಷ್ಫಲಗೊಳಿಸುವ ಸಲುವಾಗಿ ವಾದಿಯರು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.